ಹಾಕ್ಲಿಲ್ಲ ಅನ್ನು. ಅಲ್ಲಾ... ಅದಲ್ಲವಾ ದೊಡ್ಡದು? ಇವತ್ತು ನೋಡು ಅವರ ಮನೆಯೇನು? ನಡೆಯೇನು? ಏನು ಗತ್ತು ಗೈರತ್ತು? ಎಲ್ಲ ಇದ್ದು ಊರಿಗೇ ದೊಡ್ಡ ಹೆಸರಿದ್ದವರು ನಾವು. ಇವತ್ತು ನನ್ನ ಮಗ ನೋಡು, ದುಡ್ಡಿಲ್ಲ ದುಡಿಮೆಯಿಲ್ಲ ಅಂತ ಅಪ್ಪ ಮಾಡಿದ ಆಸ್ತಿಯ ಮೇಲೆ ಕೂತಿದ್ದಾನೆ. ಹೋಗಲಿ ಅದನ್ನಾದ್ರೂ ನೇರ ಮಾಡುತ್ತಾನಾ ಅಂದ್ರೆ ಅದೂ ಇಲ್ಲ. ಅಲ್ಲಿಗೂ ಪೇಪರ್ರು ಪೆನ್ನು ಹಿಡ್ಕೊಂಡು ಹೋಗ್ತಾನಂತೆ. ಯಾರೋ ಅವರಿವರು ಹೇಳೋದು ಇರಲಿ, ಮೊನ್ನೆ ನಾನೇ ನಂ ಲಕ್ಷ್ಮಿನ ಹೊಡಕೊಂಡು ಹೊಲದ ಕಡೆ ಹೋಗಿದ್ನಲ್ಲ ನೋಡ್ದೆ ಕಣೇ. ನಮ್ಮ ದೇವರ ಕಲ್ಲಿನ ಬುಡಕ್ಕೆ ಕೂತುಕೊಂಡು ಪೆನ್ನು ತುಟಿಗಿಟ್ಟು ಏನೋ ಯೋಚಿಸ್ತಾ ಕೂತಿದ್ದಾನೆ. ನಾ ಬಂದುಹೋಗಿದ್ದು ಕೂಡ ಗೊತ್ತಿಲ್ಲ ಅಂದ್ರೆ ಕೇಳ್ಕೋ, ಅದೇನೋ ಕತೆ ಕರ್ಮ ಬರೀತಾನಂತೆ, ಅದೆಲ್ಲ ಯಾಕೆ ಅಂತೀನಿ ನಾನು. ನಮ್ಮ ಕತೆಯೇ ಬೇಕಷ್ಟಿರುವಾಗ ಸುಮ್ಮನೆ ಇಲ್ಲಸಲ್ಲದ ಕತೆ ಯಾಕೆ ಬರೀಬೇಕು? ಕತೆ, ಕವಿತೆ, ಹಾಡು, ಪದ್ಯ... ನಮ್ಮ ಕುಟುಂಬದಲ್ಲಿ ಒಬ್ರೂ ಹೀಗಿರ್ಲಿಲ್ಲ ಕಣೇ' ನಮ್ಮ ಮನೆಗೆ ಯಾರೇ ಬಂದರೂ ಅಮ್ಮ ಅವರೆದುರು ಇಂಥವೇ ಮಾತಾಡುತ್ತಿದ್ದಳು. ಆದರೆ, ವಾರಿಜ ಒಳ್ಳೆಯವಳು. ಅಮ್ಮನ ಅಷ್ಟೂ ಮಾತುಗಳನ್ನ ಸಮಾಧಾನವಾಗಿ ಕೇಳಿಸಿಕೊಂಡು, ನನ್ನ ಬಗೆಗೆ ಅಮ್ಮನ ಅಭಿಪ್ರಾಯ ಬದಲಿಸುವ ವ್ಯರ್ಥ ಪ್ರಯತ್ನ ಮಾಡಿ ಹೈರಾಣಾಗುತ್ತಿದ್ದಳು.

'ಬಿಡು ವಾರೀ, ಯಾವತ್ತಾದರೂ ಅಮ್ಮನಿಗಷ್ಟೇ ಅಲ್ಲ, ಎಲ್ಲರಿಗೂ ಅರ್ಥವಾಗುತ್ತೆ ನಾನು ಯಾರೂಂತ ,ಇದು ಅವರ ನಿಲುಕಿಗೆ ಸಿಗದ ವಿಷಯ... ಅವರವರ ಕತ್ತು ಎಟುವ ತನಕವಷ್ಟೇ ಒಬ್ಬರಿಂದ ನೋಡಲು ಸಾಧ್ಯ' ನಾನು ಹಾಗಂದರೆ ವಾರಿಜ ಪಕಪಕನೆ ನಗುತ್ತಿದ್ದಳು... 'ಹಾಗೇನಿಲ್ಲ, ಕೆಲವೊಮ್ಮೆ ಪ್ರಯತ್ನ ಪಟ್ಟು ಒಂಚೂರಾದರೂ ಎಕ್ಸ್‌ಟ್ರಾ ನೋಡಬಹುದು ಅಂದು ನನ್ನನ್ನು ಪೇಚಿಗೆ ಸಿಲುಕಿಸುತ್ತಿದ್ದಳು 'ನಿನ್ನಾ...' ನಾನು ಹೊಡೆಯುವಂತೆ ಕೈ ಎತ್ತಿದರೆ ತಪ್ಪಿಸಿಕೊಂಡು ಓಡುವುದರಲ್ಲಿ ಆಕೆಗೆ ಖುಷಿ.

ವಾರಿಜ ಕೆಲಸಕ್ಕೆ ಹೋಗುತ್ತಾಳೆ. ಊರ ಶಾಲೆಯಲ್ಲಿ ಬಿಸಿಯೂಟದ ಅಡುಗೆ ಮಾಡುವ ಕೆಲಸ. ತಾಯಿಯಿಲ್ಲದ ಹುಡುಗಿಗೆ ಅಮ್ಮನ ಮೇಲೆ ತುಂಬ ಪ್ರೀತಿಯಿತ್ತು .ಇತ್ತೀಚೆಗೆ ತನ್ನ ಅಪ್ಪನನ್ನೂ ಕಳೆದುಕೊಂಡಮೇಲೆ ಅವಳು ದಿನದ ಹೆಚ್ಚಿನ ಸಮಯವನ್ನ ನಮ್ಮ ಮನೆಯಲ್ಲೇ ಕಳೆಯುತ್ತಿದ್ದಳು. ಅವಳಿಗಾದರೂ ನಮ್ಮನ್ನ ಬಿಟ್ಟರೆ ಯಾರಿದ್ದಾರೆ ಅಂತ ಅಮ್ಮನೂ ಸ್ವಲ್ಪ ಔದಾರ್ಯ ತೋರುತ್ತಿದ್ದಳು. ಅದಕ್ಕೊಂದು ಕಾರಣವೂ ಇತ್ತು. ವಾರಿಜ ನಮಗೆ ದೂರದಿಂದ ಸಂಬಂಧ. ಮನೆಯಲ್ಲಿ ಬಡತನವಿತ್ತು. ತೋಟದ ಮನೆಯಲ್ಲಿ ಉಳಿದುಕೊಂಡು ತೋಟದ ಕೆಲಸ ಮನೆ ಕೆಲಸ ಅಂತ ಮಾಡಿಕೊಡುವ ವ್ಯವಸ್ಥೆ ಮಾಡಿದ್ದು ಅಪ್ಪನೇ. ಅವಳಿಗೂ ನನಗೂ ಹೆಚ್ಚುಕಮ್ಮಿ ಒಂದೇ ವಯಸ್ಸು . ತಿಂಗಳೆರಡರಲ್ಲಿ ನಾನು ಅವಳಿಗೆ ದೊಡ್ಡವ. ಆದರೆ, ಅವತ್ತಿಗೂ ಇವತ್ತಿಗೂ ಅವಳೇ ದೊಡ್ಡವಳು ಅನಿಸುತ್ತಾಳೆ. ಅವಳು ಹೆಚ್ಚು ಓದಲಿಲ್ಲ. ಓದು ಅಂತ ಅವಳನ್ನ ಯಾರೂ ಒತ್ತಾಯಿಸಲೂ ಇಲ್ಲ, ಆದರೆ, ನಾನು ಚೆನ್ನಾಗಿ ಓದಬೇಕು, ಒಳ್ಳೆ ಕೆಲಸ ಪಡೆಯಬೇಕು ಅಂತ ಅಮ್ಮ ಸದಾ ಕನಸುತ್ತಿದ್ದಳು. ಅದರಲ್ಲೂ ನಮ್ಮನೆಯಲ್ಲಿ ಕೆಲಸಕ್ಕಿದ್ದ ಶಂಕರಯ್ಯನ ಮಗಳು ಸಿವಿಲ್ ಸರ್ವೀಸ್ ಪಾಸ್ ಮಾಡಿಕೊಂಡು ಊರೆಲ್ಲ ಸುದ್ದಿಯಾದಾಗ ಅವಳು ಹೊಟ್ಟೆಕಿಚ್ಚಿನಲ್ಲಿ ಕುದ್ದೇ ಹೋಗಿದ್ದಳು. ಅಂದಿನಿಂದ ನನಗೂ ಒಂದೇ ವರಾತ ಹಚ್ಚುತ್ತಿದ್ದಳು. ಚೆನ್ನಾಗಿ ಓದಿ, ಹೆಸರು ಮಾಡಬೇಕೆಂದು ಸದಾ ಹುರಿದುಂಬಿಸುತ್ತಿದ್ದಳು. ಅಸಲು ಕನಸುಗಳೇ ಇಲ್ಲದ ಹುಡುಗ ನಾನು. ನಿಜಕ್ಕೂ ನನಗೆ ಕನಸುಗಳೇ ಇರಲಿಲ್ಲ. ಹಾಗಂದರೆ ವಾರಿಜ ನಗುತ್ತಾಳೆ. ಕನಸುಗಳಿಲ್ಲದೇನೂ ಒಂದು ಬದುಕಿರುತ್ತೇನೋ ಅನ್ನುತ್ತಾಳೆ. 'ನನಗೆ ಕನಸು ಅಂತ ಇದ್ದರೆ ಅದು ಅವಳೊಬ್ಬಳೇ ನೋಡು ವಾರೀ,